ಬಾಯಿಗೆ ಹತೋಟಿ ಇಲ್ದೆ ಮಾತಾಡುತ್ತಿದ್ರು. ಹೀಗೆ ತನ್ನ ತವರಿನಲ್ಲಿ ಮಲತಾಯಿ ಜೊತೆ ಬದುಕು ಸಾಗಿಸಿದ್ದಕ್ಕಿಂತ ಗಂಡನ ಮನೆಯಲ್ಲಿ ಆದರೂ ಸುಖವಾಗಿರಬಹುದೆಂದು ಬಂದ ಸಂಕವ್ವ, ಭೀಮಪ್ಪ ಸತ್ತ ಒಂದು ತಿಂಗಳಾಗೆ ಎಲ್ರೂ ಅನಿಷ್ಟ ಮುಂಡೆದ್ನ ನೋಡಬಾರದಂತ ಬೇರೆಯಾಗಿ ಬಿಟ್ರು. ಏನೂ ಅರಿಯದ ಸಂಕವ್ವನಿಗೆ ಒಂದು ಮುರುಕಲು ಗುಡಿಸಲು, ನಾಲ್ಕೈದು ಪಾತ್ರೆ ಪಗಡೆ ಕೊಟ್ರು. ಗೌಡ್ರ ಮನಿಯ ಇಪ್ಪತ್ತೆಂಟು ಸಾವಿರ ಸಾಲ ಹೊರೆಸಿದ್ರು. ಆ ಸಾಲ ತೀರಿಸುವ ಸಲುವಾಗಿ ಸಂಕವ್ವ, ಗೌಡ್ರ ಹೊಲದಲ್ಲಿ ಹಬ್ಬ, ಜಾತ್ರಿ ಅನ್ದೇ ಒಂಟಿಯಾಗಿ ದಿನಾಲು ಕ್ಯಾಮೆ ಮಾಡಿ ಬಂದು, ಆ ಮುರುಕಲು ಗುಡಿಸಲಿನಲ್ಲಿ ಕುಳಿತು ಗಂಡ ಬರುತ್ತಾನೇನೋ ಅಂಬೋ ಚಿಂತೆಯಲ್ಲಿ ದಿನಾಲು ಯೋಚಿಸುವಳು. 'ಕಟ್ಟಿಕೊಂಡ ಗಂಡ ಕುಡಕನೋ ತಿರುಕನೋ ಪಾಲಿಗೆ ಬಂದಿದ್ದು ಪಂಚಾಮೃತ. ಇಂದಲ್ಲಾ ನಾಳೆ ಅವನು ಮನುಷ್ಯ ಅಗತ್ತಾನೇ' ಎಂದು ಮನಸ್ಸಿನಲ್ಲಿಯೇ ಕೊರಗಿಕೊಂಡು ಕುಡಿದು ಬಂದ ಗಂಡನಿಗೆ ಹಿಟ್ಟು ಬೇಯಿಸಿ ಹಾಕುತಿದ್ಲು.

* * *

ಅದರೆ ಇಂದು ಅದ್ಯಾವದೋ ಹಾಳ್ ಬಾವಿಗೆ ಬಿದ್ದು, ಕೈ- ಕಾಲು ಮುರಿದುಕೊಂಡಿರುವ ಗಂಡನನ್ನು ದವಾಖಾನೆಗೆ ಸೇರಿಸಿಕೊಂಡ ಸಂಕವ್ವನಿಗೆ ಮೊದಲು ನೆನಪಾಗಿದ್ದೇ ಗೆಜ್ಜೇಪುರದ ದುರ್ಗವ್ವ. ಕರಿಯನನ್ನು ಬಂದು ನೋಡಿಕೊಂಡು ಹೋಗುವವರೆಲ್ಲಾ, ದುರ್ಗವ್ವನಿಗೆ ಹರಕೆ ಕಟ್ಟಿಕೋ ಅಂತಾನೂ ಹೇಳಿದ್ರೂ. ದಿಕ್ಕು ತೋಚದ ಸಂಕವ್ವ ಗೆಜ್ಜೇಪುರದ ದುರ್ಗವ್ವನ್ನ ಬಿಟ್ಟರೆ ನನ್ನ ಕಷ್ಟಕ್ಕೆ ಬರೋರ್‍ಯಾರೂ ಇಲ್ಲಾ ಅಂತ ಹರಕೆ ಕಟ್ಟಿಕೊಂಡ್ಲು. 'ದುರ್ಗವ್ವ ನಿನ್ನ ಸತ್ಯ ಅಂಬೋದು ಇದ್ರೆ, ನನ್ನ ಗಂಡನಿಗೆ ಉಷಾರ್ ಅಗ್ಲಿ, ನಿನ್ನ ಮುಂದಿನ ಜಾತ್ರ್ಯಾಗ ಚರಗದ ಬುಟ್ಟಿ ಹೊರಿಸುತ್ತೇನೆ' ಎಂದು ಕೈಮುಗಿದ್ಲು. ಗೌಡ್ರ ಕೈ-ಕಾಲು ಹಿಡಿದು ಇನ್ನೂ ಹತ್ತು ಸಾವಿರ ಸಾಲ ಮಾಡಿ ದವಾಖಾನೆಗೆ ತೋರಿಸಿದ್ಲು. ಅಂತೂ ಇಂತೂ ಕರಿಯನಿಗೆ ಮುರಿದ ಕಾಲು-ಕೈ ಅದ್ಯಾವುದೋ ಅಪರೇಷನ್ ಮಾಡಿದಕೂಡ್ಲೇ ಸರಿ ಆಗಿ ನಡಕೊಂತ ಮನಿಗೆ ಬಂದ. ಇತ್ತ ಮನೇಲಿದ್ದ ಕರಿಯ ಒಂದು ದಿನ ಕಣ್ತುಂಬಾ ನೀರು ತುಂಬಿಕೊಂಡು, ತಾನು ಚೆನ್ನಾಗಿಲ್ದೇ ಇರೋವಾಗ, ಹೆನ್ತಿ ನನ್ನ ಉಳಿಸಿಕೊಳ್ಳೋಕೆ ಪಟ್ಟಪಾಡನ್ನು ನೆನೆಸಿಕೊಂಡು ಊರಲ್ಲಿ ಯಾರ ಸಹವಾಸ ಬೇಡೆಂದು ಮನೇಲಿತ್ತಿದ್ದ. ದಿನಕಳೆದಂತೆ ಕರಿಯ ಇವಾಗೀವಾಗ ಸಾರಾಯಿ ಗೀರಾಯಿ ಕುಡಿಯೋದು ಬಿಟ್ಟು, ಗೌಡ್ರ ಕೊಟ್ಟ ಸಾಲ್ದ ದುರ್ಗವ್ವನ ಜಾತ್ರಿ ಹೊತ್ತಿಗೆ ತೀರಿಸಬೇಕೆಂದು ನಿಶ್ಚಯಮಾಡಿದ. ಇದ್ದಕ್ಕಿದ್ದಾಗೆ ಒಂದಿನಾ 'ಸಂಕಿ ನಾನು ನಿನ್ನ ಕೂಡಿ ಕೆಲಸಕ್ಕೆ ಬತ್ತೀನಿ ಕಣಮ್ಮಿ' ಎಂದು ಕೇಳಿದ. ಸಂಕವ್ವ ಈ ಮಾತು ಕೇಳಿ ಕಣ್ಣಲ್ಲಿ ನೀರು ತುಂಬಿಕೊಂಡು, 'ದುರ್ಗವ್ವ ನಿನ್ನ ನಂಬಿದ್ದಕ್ಕೆ ಕೊನೆಗೂ ನನ್ನ ಗಂಡನಿಗೆ ಹೆನ್ತಿ ಅನ್ನೋ ಕಬುರು ಕೊಟ್ಟೆಯಲ್ಲೇ ನನ್ನ ತಾಯಿ' ಎಂದು ಮನಸ್ಸಿನಲ್ಲಿ ಅಂದುಕೊಂಡ್ಲು. 'ನಾಳೆ ಗೌಡ್ರತಾವ ಕೇಳಿ ಬರುತ್ತೀನಿ, ಅಲ್ಲಿಗಂಟ ಸುಮ್ಮಕಿರು' ಎಂದು ಕರಿಯನಿಗೆ ಕೆಲಸ ಕೊಡುತ್ತಾರೋ ಇಲ್ಲೋ ಎಂಬ ನಂಬಿಕೆಯಿಲ್ದೆ ಸಂಕವ್ವ ಗೌಡ್ರಮನಿಗೆ ಬಂದ್ಲೂ. ಸಾಲಕೊಟ್ಟ ಗೌಡ ಸಂಕವ್ವನನ್ನು ನೋಡಿದ ತಕ್ಷಣ ಗುಬ್ಬಿಗೂಡಿಗೆ ಕಣ್ಣಿಟ್ಟ ಪಕ್ಷಿಯಂತೆ ನೋಡಕತ್ತಿದ. ಸಂಕವ್ವ ಬಂದವಳೆ 'ಬುದ್ಧಿ ನಾಳೆಯಿಂದ ನಮ್ಮ ಕರಿಯ ನಿಮ್ಮ ತೋಟಕ್ಕೆ ಕೆಲಸಕ್ಕೆ ಬತ್ತಾನಂತೆ ಕರಕೊಂಡು ಬತ್ತೀನಿ' ಎಂದು ಮೆಲ್ಲನೇ ಕೇಳಿದ್ಲು. 'ಅಲ್ಲ ಕಮ್ಮಿ ಮಳೆ ಹೋಗಿ ಮುಗಿಲು ಸೇರೈತೆ. ನೀರು ಬಿಡೋಕೆ ಆಳು ಬತ್ತಿನಂದ್ರೆ ಬ್ಯಾಡನಂತೀನ. ಸಾಲ ಬ್ಯಾರೆ ಬಾಳ ಐತ್ತಿ ನಿಂದು, ಆತು ನಾಳಿಂದ ಇಬ್ಬರೂ ಬಂದು ಹಳೆತೋಟದಾಗ ಜ್ವೋಳ ಬಿತ್ತಿರೀ' ಎಂದು ಹೇಳುತ್ತಿದ್ದಂತೆ, ಸಂಕವ್ವಗೆ ಹೋದ ಜೀವಕ್ಕೆ ಎರಡು ಹನಿ ನೀರು ಬಿಟ್ಟಷ್ಟು ಸಂತೋಷ ಪಟ್ಟಕೊಂಡು, 'ಒಂದು ಆಳಗಿನ್ನ ಎರಡು ಆಳು ದುಡಿದ್ರೇ, ನಮ್ಮ ಜೀತದ ಸಾಲ ಬೇಗ ಮುಗಿತದ' ಅಂದುಕೊಂಡು ಮನಿಗೆ ಬಂದ್ಲು. ಕರಿಯನಿಗೆ ಗೌಡ ಒಪ್ಪಿಕೊಂಡ ಸುದ್ದಿ ತಿಳಿದು, ಅಂದಿನಿಂದ ಗೌಡ್ರ ಹೊಲದಲ್ಲಿ ಹೆನ್ತಿ ಜೊತೆಕೂಡಿ ಕ್ಯಾಮೆಗೆ ಹೋಗುತ್ತಿದ್ದ. ಅದನ್ನು ನೋಡಿದ ಊರಿನ ನಾಲ್ಕೈದು ಮುದುಕರು 'ಏನ್ಲೇ ಕರಿಯ ಬಿದ್ದಾಗಲ್ಲಿಂದ ಛಲೋ ಬುದ್ಧಿ ಬಂದಾಗೈತೀ, ಪಾಪ ಆ ಮಗಿ ಒಂದೇ ಕ್ಯಾಮೆ ಮಾಡುತ್ತಿದ್ಲೂ. ನೀನು ಅವ್ವಗೆ ಹೆಗಲು ಕೊಟ್ಟರೇ ನಿಮ್ಮ ಅಣ್ಣನವರಂತೆ ಮುಂದೆ ಬರುತ್ತೀಯ ಕಣ್ಲೇ, ಆ